ದಿನಾಂಕಃ04-08-2021 ರಂದು ಆದ ಮಧ್ಯಂತರ ಅರ್ಜಿ ಸಂಖ್ಯೆ.13 ಮತ್ತು 14 ರ ಆದೇಶದ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೋಸ್ಕರ ಸಾಕ್ಷಿಯನ್ನು ಮರಳಿ ಕರೆಯಲಾಗಿದೆ.

ದಿನಾಂಕಃ 04-08-2021 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಂದುವರೆದ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ, ಸದರಿ ನನ್ನ ಮುಂದುವರೆದ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ.

ªÄÄAzÄªgz ªÄÄR «ZÁguB ಶ್ರೀ.ಎ.ಟಿ.ಬಿ ವಕೀಲರು ಏನು ಇಲ್ಲ ಎಂದು ನುಡಿದಿರುತ್ತಾರೆ.

¥ÁnÃ ¸ªÁ®ÄB 1 ರಿಂದ 4ನೇ ಪ್ರತಿವಾದಿಗಳ ಪರ ಶ್ರೀ.ಎಂ.ಎಸ್.ಹೆಚ್ ವಕೀಲರಿಂದಃ

ನನ್ನ ತಾತನ ಹೆಸರು ಬಲವಂತ್ರಾಯ. ಸದರಿ ನನ್ನ ತಾತ ಬಲವಂತ್ರಾಯನ ತಂದೆಯ ಹೆಸರು ಗೂಳಪ್ಪಗೌಡ. ನನ್ನ ತಾತ ಬಲವಂತ್ರಾಯನಿಗೆ ಇಬ್ಬರು ಮಕ್ಕಳು. ಅವರೆಂದರೆ 1)ಭೀಮನಗೌಡ ಮತ್ತು 2) ಬಸನಗೌಡ. ಸದರಿ ಬಸನಗೌಡನಿಗೆ ಒಬ್ಬ ಗಂಡು ಮಗ ಗೂಳಪ್ಪ

ಮತ್ತು ಒಬ್ಬ ಮಗಳು ಬಸಲಿಂಗಮ್ಮ. ಸದರಿ ಬಸಲಿಂಗಮ್ಮಳಿಗೆ ಮಕ್ಕಳು ಇರುವುದಿಲ್ಲ. ಸದರಿ ಗೂಳಪ್ಪನಿಗೂ ಸಹ ಮಕ್ಕಳು ಇರುವುದಿಲ್ಲ. ಸದರಿ ಗೂಳಪ್ಪನಿಗೆ ಮದುವೆ ಆಗಿತ್ತು. ಸದರಿ ಗೂಳಪ್ಪನ ಹೆಂಡತಿಯ ಹೆಸರು ಮಹಾದೇವಮ್ಮ. ನನ್ನ ತಂದೆ ಭೀಮಣ್ಣ ಮತ್ತು ಆತನ ಸಹೋದರ ಬಸನಗೌಡನ ಮಧ್ಯೆ ಆಸ್ತಿಗಳಲ್ಲಿ ವಿಭಾಗ ಆಗಿದೆ. ಸದರಿಯವರ ಮಧ್ಯೆ ಆದ ವಿಭಾಗಕ್ಕೆ ಸಂಬಂಧಪಟ್ಟ ವಿಭಾಗ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ಸದರಿ ವಿಭಾಗದಲ್ಲಿ ಭೀಮಣ್ಣನಿಗೆ ಸರ್ವೆ.ನಂ.26 ರಲ್ಲಿ 14 ಎಕರೆ ಜಮೀನು, ಸರ್ವೆ.ನಂ.21 ರಲ್ಲಿ 5 ಎಕರೆ 14 ಗುಂಟೆ, ಸರ್ವೆ.ನಂ.70 ರಲ್ಲಿ 13 ಎಕರೆ 25 ಗುಂಟೆ ಜಮೀನು ಸದರಿ ವಿಭಾಗದಲ್ಲಿ ಭೀಮಣ್ಣನ ಹಿಸ್ಸೆಗೆ ಬಂದಿರುತ್ತದೆ. ಸದರಿ ಬಸನಗೌಡನಿಗೆ ಸರ್ವೆ.ನಂ.26 ರಲ್ಲಿ 08 ಎಕರೆ 1 ಗುಂಟೆ, ಸರ್ವೆ.ನಂ.70 ರಲ್ಲಿ 13 ಎಕರೆ 21 ಗುಂಟೆ, ಸರ್ವೆ.ನಂ.21 ರಲ್ಲಿ 5 ಎಕರೆ 16 ಗುಂಟೆ, ಸರ್ವೆ.ನಂ.94/1 ರಲ್ಲಿ 2 ಎಕರೆ 15 ಗುಂಟೆ ಜಮೀನುಗಳು ಸದರಿ ವಿಭಾಗದಲ್ಲಿ ಬಸನಗೌಡನ ಪಾಲಿಗೆ ಬಂದಿವೆ. ಸದರಿ ಸರ್ವೆ.ನಂ.94/1 ರ 2 ಎಕರೆ 18 ಗುಂಟೆ ಜಮೀನು (ದಾವಾ ಸ್ವತ್ತು) ಮಹಾದೇವಮ್ಮ ಗಂಡ ಗೂಳಪ್ಪನ ಹೆಸರಿನಲ್ಲಿ ಇದೆ. ಸದರಿ ಮಹಾದೇವಮ್ಮ ಗಂಡ ಗೂಳಪ್ಪಳ ಪಾಲಿಗೆ ಸರ್ವೆ.ನಂ.26 ರಲ್ಲಿ 14 ಎಕರೆ ಜಮೀನು ಬಂದಿರುತ್ತದೆ.

ಸರ್ವೆ.ನಂ.26 ರ ಜಮೀನನ್ನು ನನ್ನ ಹೆಸರಿಗೆ ನಾನು ಮ್ಯುಟೇಷನ್ ಮಾಡಿಸಿಕೊಂಡಿರುವುದಿಲ್ಲ, ಸಾಕ್ಷಿ ಮುಂದುವರೆದು ಸದರಿ ಮಹಾದೇವಮ್ಮಳೇ ನನ್ನ ಹೆಸರಿಗೆ ಮ್ಯುಟೇಷನ್ ಮಾಡಿಸಿದ್ದಾಳೆ ಎಂದು ನುಡಿಯುತ್ತಾನೆ. ಸರ್ವೆ.ನಂ.26 ರ 14 ಎಕರೆ ಜಮೀನಿನ ಪೈಕಿಯ 6 ಎಕರೆ ಜಮೀನು ನನ್ನ ಹೆಸರಿಗೆ ಮ್ಯುಟೇಷನ್ ಆಗಿದೆ ಉಳಿದ 8 ಎಕರೆ ಜಮೀನು ಯಾರ ಹೆಸರಿಗೆ ಮ್ಯುಟೇಷನ್ ಆಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಸರ್ವೆ.ನಂ.26 ರ 14 ಎಕರೆ ಜಮೀನನ್ನು ನಾನೇ ಸಾಗುವಳಿ ಮಾಡುತ್ತೇನೆ. ಸದರಿ ಮಹಾದೇವಮ್ಮಳ ಹೆಸರಿನಲ್ಲಿರುವ ಜಮೀನನ್ನು ಸಹ ನಾನೇ ಮೊದಲಿನಿಂದಲೂ ಸಹ ಸಾಗುವಳಿ ಮಾಡುತ್ತಾ ಬಂದಿದ್ದೇನೆ. ನನ್ನ ಹೆಸರಿಗೆ ಸದರಿ ಸರ್ವೆ.ನಂ.26 ರ 14 ಎಕರೆ ಜಮೀನಿನ ಪೈಕಿಯ 6 ಎಕರೆ ಜಮೀನು ಮ್ಯುಟೇಷನ್ ಆದ ಸಮಯದಲ್ಲಿಯೇ ಉಳಿದ 8 ಎಕರೆ ಜಮೀನು ಈ ದಾವೆಯ 1ನೇ ಪ್ರತಿವಾದಿ ಹನುಮಂತ್ರಾಯನ ಹೆಸರಿಗೆ ಮ್ಯುಟೇಷನ್ ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಸರ್ವೆ.ನಂ.26 ರ 14 ಎಕರೆ ಜಮೀನಿನ ಪೈಕಿಯ 6 ಎಕರೆ ಜಮೀನು ನನ್ನ ಹೆಸರಿಗೆ ಮ್ಯುಟೇಷನ್ ಆದ ಜಮೀನನ್ನು ನಾನು ಈ ದಾವೆಯ ದಾವಾ ಸ್ವತ್ತು ಎಂದು ಸೇರ್ಪಡೆ ಮಾಡಿರುವುದಿಲ್ಲ, ಸಾಕ್ಷಿ ಮುಂದುವರೆದು ಸದರಿ ಮಹಾದೇವಮ್ಮ ಸದರಿ ಜಮೀನನ್ನು ನನಗೆ ಬಿಟ್ಟು ಕೊಟ್ಟಿರುತ್ತಾಳೆ ಎಂದು

ನುಡಿಯುತ್ತಾಳೆ. ಸದರಿ ಮಹಾದೇವಮ್ಮ ನನ್ನ ಹೆಸರಿಗೆ ಬಿಟ್ಟು ಕೊಟ್ಟಿರುವ 6 ಎಕರೆ ಜಮೀನಿನ ಬಗ್ಗೆ ಯಾವುದೇ ಕಾಗದ ಪತ್ರಗಳು ಆಗಿರುವುದಿಲ್ಲ. ಸದರಿ ನನ್ನ ಹೆಸರಿಗೆ ಆದ 6 ಎಕರೆ ಜಮೀನಿನ ಮ್ಯುಟೇಷನ್ ದಾಖಲೆಗಳನ್ನು ನಾನು ಈ ದಾವೆಯಲ್ಲಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಈ ದಾವೆಯ 1ನೇ ಪ್ರತಿವಾದಿ ಹನುಮಂತ್ರಾಯ ಸದರಿ ಮಹಾದೇವಮ್ಮ ಗಂಡ ಗೂಳಪ್ಪನ ತಮ್ಮನಾಗಬೇಕು. ಈ ದಾವೆಯ ಎಲ್ಲಾ ದಾವಾ ಸ್ವತ್ತುಗಳು ಸದರಿ ಮಹಾದೇವಮ್ಮ ಗಂಡ ಗೂಳಪ್ಪ ಳ ಪಾಲಿಗೆ ಬಂದ ಆಸ್ತಿಗಳು ಆಗಿವೆ ಎಂದರೆ ಸರಿ. ಸದರಿ ಮಹಾದೇವಮ್ಮ ಗಂಡ ಗೂಳಪ್ಪ ತನ್ನ ಜೀವಿತ ಅವಧಿಯಲ್ಲಿ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮೃತ್ಯು ಪತ್ರವನ್ನು ಬರೆದು ಇಟ್ಟಿದ್ದಳು ಎಂದು ಕೇಳಿದ ಪ್ರಶ್ನೆಗೆ ಅದು ಡೂಪ್ಲಿಕೇಟ ಎಂದು ನುಡಿಯುತ್ತಾನೆ. ಸದರಿ ಮಹಾದೇವಮ್ಮ ತನ್ನ ನೋಂದಣಿ ಮೃತ್ಯು ಪತ್ರದ ಮುಖಾಂತರ ಸದರಿ 6 ಎಕರೆ ಜಮೀನನ್ನು ನನಗೆ ವರ್ಗಾವಣೆ ಮಾಡಿದ್ದಾಳೆ ಎಂದರೆ ಸರಿಯಲ್ಲ. ಸದರಿ ಮಹಾದೇವಮ್ಮ ಈ ದಾವೆಯ ಸರ್ವೆ.ನಂ.26 ರ 14 ಎಕರೆಯ ಪೈಕಿಯ 6 ಎಕರೆ ಜಮೀನನ್ನು ನನ್ನ ಹೆಸರಿಗೆ ಹಾಗೂ ಈ ದಾವೆಯ ಉಳಿದ ಎಲ್ಲಾ ದಾವಾ ಸ್ವತ್ತುಗಳನ್ನು ಈ ದಾವೆಯ 1ನೇ ಪ್ರತಿವಾದಿಯಾದ ಹನುಮಂತ್ರಾಯನಿಗೆ ಸದರಿ ತನ್ನ

ನೋಂದಣಿ ಮೃತ್ಯು ಪತ್ರದ ಮುಖಾಂತರ ಹಸ್ತಾಂತರಿಸಿದ್ದಾಳೆ ಎಂದರೆ ಸರಿಯಲ್ಲ. ಸದರಿ ಮಹಾದೇವಮ್ಮಳ ಜೀವಿತ ಅವಧಿಯಲ್ಲಿ ನಾನು ಆಕೆಗೆ ಕಿರುಕಳ ಕೊಟ್ಟಿದ್ದೇನೆ ಎಂದು ಹೇಳಿ ಸದರಿ ಮಹಾದೇವಮ್ಮ ಸದರಿ 6 ಎಕರೆ ಜಮೀನನ್ನು ನನ್ನ ಹೆಸರಿಗೆ ಮ್ಯುಟೇಷನ್ ಮಾಡಿಸಿ ಕೊಟ್ಟಿದ್ದಾಳೆ ಎಂದರೆ ಸರಿಯಲ್ಲ. ಸದರಿ ಮಹಾದೇವಮ್ಮ ಉಳಿದ ಎಲ್ಲಾ ದಾವಾ ಸ್ವತ್ತುಗಳನ್ನು ಸದರಿ 1ನೇ ಪ್ರತಿವಾದಿ ಹನುಮಂತ್ರಾಯನ ಹೆಸ್ಸೆಗೆ ಮ್ಯುಟೇಷನ್ ಮಾಡಿಸಿ ಕೊಟ್ಟಿದ್ದಾಳೆ ಎಂದರೆ ಸರಿಯಲ್ಲ. 1988 ನೇ ಇಸ್ವಿಯಲ್ಲಿ ಆದ ಮ್ಯುಟೇಷನ್‌ಗಳ ಸಮಯದಿಂದ ಈ ದಾವೆಯ 1ನೇ ಪ್ರತಿವಾದಿ ಹನುಮಂತ್ರಾಯನೇ ದಾವಾ ಸ್ವತ್ತಿನ ಎಲ್ಲಾ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಾನೇ ಮಾಡುತ್ತಿದ್ದೇನೆ ಎಂದು ನುಡಿಯುತ್ತಾನೆ. ಸದರಿ ನೋಂದಣಿ ಮೃತ್ಯು ಪತ್ರದ ಬಗ್ಗೆ ಹಾಗೂ ಕೇವಲ 6 ಎಕರೆ ಜಮೀನು ನನ್ನ ಹೆಸರಿಗೆ ಮ್ಯುಟೇಷನ್ ಆಗಿರುವ ವಿಷಯಗಳು ಗೊತ್ತಿದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1988ನೇ ಇಸ್ವಿಯಿಂದ ದಾವಾ ಸ್ವತ್ತುಗಳ ಪಹಣಿಗಳಲ್ಲಿ ಈ ದಾವೆಯ 1ನೇ ಪ್ರತಿವಾದಿಯ ಹೆಸರು ನಮೂದು ಆಗಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ತಾನು ಪಹಣಿಗಳನ್ನು ನೋಡಿರುವುದಿಲ್ಲ

ಎಂದು ನುಡಿಯುತ್ತಾನೆ. ನನ್ನ ಹೆಸರಿಗೆ ಇರುವ 6 ಎಕರೆ ಜಮೀನಿನ ಪಹಣಿಯನ್ನು ನಾನು 1992ನೇ ಇಸ್ವಿಯಲ್ಲಿ ನೋಡಿದ್ದೇನೆ. ಸದರಿ 1992ನೇ ಇಸ್ವಿಯ ಪಹಣಿಯಲ್ಲಿ ನನ್ನ ಹೆಸರು ಮತ್ತು 1ನೇ ಪ್ರತಿವಾದಿ ಹನುಮಂತ್ರಾಯನ ಹೆಸರು ನಮೂದು ಆಗಿದ್ದನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತುಗ್ತಳ ಪೈಕಿಯ 2 ಜಮೀನುಗಳನ್ನು ಮಾರಾಟ ಮಾಡಲಾಗಿದೆ ಎಂದರೆ ಸರಿ. ಈ ದಾವೆಯ 1ನೇ ಪ್ರತಿವಾದಿ ಹನುಮಂತ್ರಾಯ ದಾವಾ ಸ್ವತುಗ್ತಳನ್ನು ಬ್ಯಾಂಕುಗಳಲ್ಲಿ ಅಡಮಾನ (ಒತ್ತೆ) ಮಾಡಿದ್ದಾನೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ